**IN THE COURT OF PRL. CIVIL JUDGE AND J.M.F.C., HOSADURGA.**

**Original Suit No.233/2022**
**PW-2.**

| | |
|---|---|
| **Name** | **-Dr.K.R.Sridhar** |
| **Father name** | **-Ramabhatta** |
| **Age** | **-79 years** |
| **Occupation** | **- Senior Psychiatrist** |
| **R/at** | **-Sridhar Nursing Home, Shivamogga** |

**Witness Duly Sworn on this Monday, on: 18-12-2023**

**Examination-in-chief by Sri.KKM Counsel for the Plaintiff**

ನಾನು ಎಂ ಡಿ ಸೈಕಿಯಾಟ್ರಿಸ್ಟ್ (Doctor of Medicine) Diploma in Physiological Science. ನಾನು ಕಳೆದ 53 ವರ್ಷಗಳಿಂದ ಮನೋವೈದ್ಯರಾಗಿ ಶಿವಮೊಗ್ಗದ ಶ್ರೀಧರ್ ನರ್ಸಿಂಗ್ ಹೋಂ ನಲ್ಲಿ ಕರ್ತವ್ಯನಿರ್ವಹಿಸುತ್ತಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದೇಶ ತಂದೆ ಲೇಟ್ ನಾಗರಾಜಪ್ಪ ಎಂಬುವವರನ್ನು ದಿನಾಂಕ 14-7-2014 ರಂದು ವೈದ್ಯಕೀಯ ಪರೀಕ್ಷೆ ಮಾಡಿರುತ್ತೇನೆ. ಸದರಿಯವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಸದರಿಯವರು ಬುದ್ದಿಭ್ರಮಣೆ ಖಾಯಿಲೆ ಮತ್ತು ಬುದ್ಧಿ ಮಾಂದ್ಯತೆ ಖಾಯಿಲೆಯಿಂದ ಬಳಲುತ್ತಿರುವುದ ಕಂಡುಬಂದಿತ್ತು. (Psychosis and Mental Retardation). ಸದರಿಯವರು ಈ ಖಾಯಿಲೆಗಳಿಂದ ಸುಮಾರು 7 ವರ್ಷಗಳಿಂದ ಬಳಲುತ್ತಿದ್ದರು. ಸದರಿಯವರಿಗೆ ಚಿಕಿತ್ಸೆ ಮಾಡಿದ ದಾಖಲಾತಿಗಳು ಹಳೆಯ ದಾಖಲಾತಿಗಳಾಗಿರುವುದರಿಂದ ನಮ್ಮ

ಚಿಕಿತ್ಸಾಲಯದಲ್ಲಿ ಲಭ್ಯ ಇರುವುದಿಲ್ಲ. ಆದ್ದರಿಂದ ಅವುಗಳನ್ನು ಹಾಜರುಪಡಿಸಲು ಸಾಧ್ಯವಾಗಿಲ್ಲ.

3. ನಂತರ ದಿನಾಂಕ 3-6-2015 ರಂದು ಪುನಃ ಚಿಕಿತ್ಸೆ ನೀಡಿರುತ್ತೇನೆ. ಆ ದಿನ ರೋಗಿಯು ಹಿಂದಿನ ವೈದ್ಯಕೀಯ ಪರೀಕ್ಷೆಯ ದಿನದ ಪರಿಸ್ಥಿತಿಗಿಂತ ಸುಮಾರು ಶೇಕಡಾ 15 ರಷ್ಟು ಚೇತರಿಕೆಯಾಗಿದ್ದರು.

4. ದಿನಾಂಕ 25-10-2021 ಪುನಃ ಪರೀಕ್ಷಿಸಿದಾಗ ಸದರಿಯವರಿಗೆ Psychosis-Schizophrenia (ಇಚ್ಚಿತ ವಿಕಲತೆ) ಎಂಬ ಖಾಯಿಲೆಯಿಂದ ಬಳಲುತ್ತಿದ್ದರು. ಈ ಕುರಿತು ನಾನು ವೈದ್ಯಕೀಯ ಪರೀಕ್ಷೆಯ ಬಗ್ಗೆ ಮತ್ತು ಚಿಕಿತ್ಸೆಯ ಬಗ್ಗೆ ದಾಖಲಾತಿಗಳನ್ನು ನೀಡಿದ್ದೇನೆ. **ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-1 ಮತ್ತು 2 ಎಂದು ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು.**

**ನ್ಯಾಯಾಲಯದ ಪ್ರಶ್ನೆ**

1. 2014 ರ ದಾಖಲಾತಿಗಳು ಹಳೆಯದಾಗಿರುವುದರಿಂದ ಅವುಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತೀರಿ ಆದರೆ 2015 ಮತ್ತು 2021 ರ ದಾಖಲೆಗಳನ್ನು ಯಾವ ಕಾರಣಕ್ಕೆ ಹಾಜರುಪಡಿಸಿಲ್ಲ?

**ಉತ್ತರಃ ಅವುಗಳನ್ನು ಹುಡುಕಾಡಿದ ನಂತರ ಸಿಕ್ಕಿರುವುದಿಲ್ಲ. 5 ವರ್ಷದ ನಂತರ ನಮ್ಮ ಆಸ್ಪತ್ರೆಯ ದಾಖಾಲತಿಗಳು ಲಭ್ಯ ಇರುವುದಿಲ್ಲ ಎಂದು ಮುಂದುವೆರದು ಉತ್ತರಿಸುವರು.**

5. ದಿನಾಂಕ 1-10-2023 ರಂದು ಕೂಡ ನಾನು ಚಿಕಿತ್ಸೆಯನ್ನು ನೀಡಿರುತ್ತೇನೆ. ಈ ಕುರಿತು ನಮ್ಮ ಆಸ್ಪತೆಯಲ್ಲಿ ಚೀಟಿಯನ್ನು ಕೂಡ ಕೊಟ್ಟಿದ್ದೇನೆ. **ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.**

6. ನಿಪಿ-3 ರಲ್ಲಿ ರೋಗಿಯು ಅಸಂಬದ್ದವಾಗಿ ತನ್ನಷ್ಟಕ್ಕೆ ತಾನು ಒಬ್ಬರೇ ಮಾತನಾಡುತ್ತಿದ್ದರು, ಒಬ್ಬರೇ ತನ್ನಷ್ಟಕ್ಕೆ ತಾನೇ ಓಡಾಡುತ್ತಿದ್ದರು. 2009 ರಲ್ಲಿ ಮೊದಲಬಾರಿಗೆ ಒಳರೋಗಿಯಾಗಿ ದಾಖಲಿಸುತ್ತಾ ಬಂದಿದ್ದು ಕೂಡ ನಮೂದು ಇದೆ.

7. ಸದರಿ ಖಾಯಿಲೆಯಿಂದ ಬಳಲುವ ವ್ಯಕ್ತಿಗಳು ಸಾಮಾನ್ಯವಾಗಿ ತನ್ನಷ್ಟಕ್ಕೆ ತಾನೇ ಅಸಂಬದ್ದವಾಗಿ ಮಾತನಾಡಿಕೊಳ್ಳುತ್ತಾರೆ. ಯಾವ ತೀರ್ಮಾನವನ್ನು ತೆಗೆದುಕೊಳ್ಳಲು ಮಾನಸಿಕವಾಗಿ ಸದೃಢರಾಗಿರುವುದಿಲ್ಲ. ಸಂಶಯದ ಭಯದಿಂದ ಬಳಲುತ್ತಿರುತ್ತಾರೆ. ತನ್ನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಲು ಸಾಧ್ಯ ಇರುವುದಿಲ್ಲ. ಬುದ್ದಿಮಾಂದ್ಯತೆ ಇರುವುದರಿಂದ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದು ತಿಳಿದಿರುವುದಿಲ್ಲ.

ನ್ಯಾಯಾಲಯದ ಪ್ರಶ್ನೆಃ

**Original Suit No.233/2022**
**PW-2.**

1. ಸದರಿ ಖಾಯಿಲಿಗಳಿಂದ ಬಳಲುವ ವ್ಯಕ್ತಿಗಳು ಸಾಮಾನ್ಯವಾಗಿ ಕೆಲವು ಅವಧಿಯವರಗೆ ಪುನಃ ಚೇತರಿಸಿಕೊಳ್ಳುವ ಸಾಧ್ಯತೆ ಇದ್ದು ಪುನಃ ಅದೇ ಪರಿಸ್ಥಿತಿಗೆ ಹೋಗುವ ಸಾಧ್ಯತೆ ಇದೆಯಾ?

**ಉತ್ತರಃ** ಬುದ್ದಿ ಮಾಂಧ್ಯತೆ ಇರುವುದರಿಂದ ಸಾಧತೆಗಳು ತೀರಾ ಕಡಿಮೆ ಎಂದು ಉತ್ತರಿಸುವರು.

**ಈ ಹಂತದಲ್ಲಿ ಪ್ರತಿವಾದಿಯ ಪರ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.　　　　　　　　ನನ್ನ ಸಮಕ್ಷಮ

ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.